# ದೆಹಲಿಯಲ್ಲಿ ಇವಿ ಡೇಟಾಬೇಸ್



■ **ಶಶಿಕುಮಾರ್ ಸಿ.**

ದೇಶದೆಲ್ಲೆಡೆ ಎಲೆಕ್ಟ್ರಿಕ್ ವಾಹನಗಳ ಸದ್ದು ಜೋರಾಗಿ ಕೇಳುತ್ತಿದೆ. ಈ ವಾಹನಗಳತ್ತ ಮುಖಮಾಡುವವರ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿದೆ. ಆದರೆ ಅದಕ್ಕೆ ಪೂರಕವಾದ ವಾತಾವರಣ ಇನ್ನೂ ಎಲ್ಲೆಡೆ ಲಭ್ಯವಿಲ್ಲ. ಈ ನಿಟ್ಟಿನಲ್ಲಿ ಮಿಕ್ಕೆಲ್ಲಾ ಸರ್ಕಾರಗಳಿಗಿಂತ ಒಂದು ಹೆಜ್ಜೆ ಮುಂದೆ ಯೋಚಿಸಿರುವ ದೆಹಲಿ ಸರ್ಕಾರ, ಎಲೆಕ್ಟ್ರಿಕ್ ವಾಹನಗಳಿಗೆ (ಇವಿ) ಸಂಬಂಧಿಸಿದ ಡೇಟಾಬೇಸ್ ತಂತ್ರಜ್ಞಾನದ ವ್ಯವಸ್ಥೆಯನ್ನು ಈಚೆಗೆ ಅಳವಡಿಸಿದೆ.

ಅಲ್ಲದೆ, ಮುಂದಿನ 3 ವಾರಗಳಲ್ಲಿ ಇದರಲ್ಲಿ ಮಾಹಿತಿ ಸಲ್ಲಿಸುವಂತೆ ಸಾರ್ವಜನಿಕ ಅಥವಾ ಅರೆ–ಸಾರ್ವಜನಿಕ/ಸ್ವಾಪಿಂಗ್ ಸ್ಟೇಷನ್‌ಗಳನ್ನು ನಿರ್ವಹಿಸುವ ಘಟಕಗಳಿಗೆ ಸೂಚನೆ ನೀಡಿದೆ.

ಈ ಸೌಲಭ್ಯದಡಿ ಇವಿ ಚಾರ್ಜಿಂಗ್ ಸೌಲಭ್ಯದ ಬಗ್ಗೆ ಸಾರ್ವಜನಿಕರು ಸಮಗ್ರ ಮಾಹಿತಿ ಪಡೆಯಬಹುದು. ಇದರ ನಿರ್ವಹಣೆಯನ್ನು ಅಲ್ಲಿನ ಸಾರಿಗೆ ಇಲಾಖೆಯು ನೋಡಿಕೊಳ್ಳಲಿದ್ದು, ಮಾಲಿನ್ಯದಿಂದ ತತ್ತರಿಸುತ್ತಿರುವ ದೆಹಲಿಯ ನಿವಾಸಿಗಳನ್ನು ಪರಿಸರಸ್ನೇಹಿ ಇವಿಗಳತ್ತ ಪ್ರಖರವಾಗಿ ಸೆಳೆಯಲು ಇದು ಸಹಾಯಕ.

ಸಾರಿಗೆ ಇಲಾಖೆ ಹೊರಡಿಸಿದ ಅಧಿಸೂಚನೆಯ ಪ್ರಕಾರ, ಸಾರ್ವಜನಿಕ ಚಾರ್ಜಿಂಗ್ ಮೂಲ ಸೌಕರ್ಯದ ಬಗ್ಗೆ ಮಾಹಿತಿ, ಚಾರ್ಜರ್‌ನ ಸ್ಥಳಗಳು, ಒಂದು ಪ್ರದೇಶದಲ್ಲಿ ಇರುವ ಚಾರ್ಜಿಂಗ್ ಪಾಯಿಂಟ್ಸ್, ಸೈಟ್‌ಗಳ ಸಂಖ್ಯೆ, ಪಾವತಿ ಮೊತ್ತ, ಪಾವತಿ ಬಗೆ (ಕಿಲೋ ವ್ಯಾಟ್ ಅಥವಾ ಗಂಟೆ ಲೆಕ್ಕದಲ್ಲಿ) ಸೇರಿದಂತೆ ಇವಿ ಚಾರ್ಜಿಂಗ್ ವ್ಯವಸ್ಥೆಯ ಮಾಹಿತಿಯು ಈ ಡೇಟಾಬೇಸ್‌ನಲ್ಲಿ ಲಭ್ಯವಾಗಲಿದೆ.

ಚಾರ್ಜಿಂಗ್ ಪಾಯಿಂಟ್ ನಿರ್ವಾಹಕರು ಈ ಸಾರ್ವಜನಿಕ ಡೇಟಾಬೇಸ್‌ಗೆ ಮಾಹಿತಿ ಸಲ್ಲಿಸಬೇಕು. ಇದರಿಂದ ವಾಹನದ ನ್ಯಾವಿಗೇಷನ್ ಸಿಸ್ಟಮ್‌ಗಳು, ಚಾರ್ಜಿಂಗ್ ಅಪ್ಲಿಕೇಶನ್‌ಗಳು ಮತ್ತು ನಕ್ಷೆಗಳ ಮೂಲಕ ಈ ಮಾಹಿತಿಯನ್ನು ಉಚಿತವಾಗಿ ಬಳಸಬಹುದಾಗಿದೆ. ಸಾರ್ವಜನಿಕ ಚಾರ್ಜಿಂಗ್ ವ್ಯವಸ್ಥೆ ಮತ್ತು ಅದರ ಮೂಲಸೌಕರ್ಯಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲು ಮತ್ತು ಸಲ್ಲಿಸಲು ನೋಂದಾಯಿತ ಘಟಕಗಳು ಅಥವಾ ವ್ಯಕ್ತಿಗಳು ಡೇಟಾಬೇಸ್‌ಗೆ ಲಾಗ್ ಆನ್ ಆಗಬೇಕು. ಈ ಮಾಹಿತಿ ಪಡೆಯಲು ಇಲಾಖೆಯ ಇವಿ ಪೋರ್ಟಲ್‌ಗೆ (ವೆಬ್‌ಸೈಟ್) ಲಾಗ್ ಆನ್ ಆಗಬೇಕು.

ವೆಬ್‌ಸೈಟ್‌ನಲ್ಲಿ ವಿನಂತಿ ಸಲ್ಲಿಸುವ ಮೂಲಕ ಸ್ಥಿರ ಮತ್ತು 'ರಿಯಲ್ ಟೈಮ್' ಮಾಹಿತಿಗಳೆರಡನ್ನೂ ಪಡೆಯಬಹುದು. ಸಾರ್ವಜನಿಕ ಮತ್ತು ಖಾಸಗಿ ಕಟ್ಟಡಗಳಾದ ಶಾಪಿಂಗ್ ಸೆಂಟರ್‌ಗಳು, ಥಿಯೇಟರ್‌ಗಳು, ದಿನಸಿ ಅಂಗಡಿಯ ಸುತ್ತಮುತ್ತ ಸ್ಥಾಪಿಸಲಾದ ಸಾರ್ವಜನಿಕ, ಅರೆ–ಸಾರ್ವಜನಿಕ ಇವಿ ಚಾರ್ಜಿಂಗ್ ಸ್ಟೇಷನ್‌ಗಳನ್ನು ನಿರ್ವಹಿಸುವ ಎಲ್ಲ ಘಟಕಗಳು ಇಲಾಖೆ ಕೇಳಿದ ಮಾಹಿತಿಯನ್ನು ಡೇಟಾಬೇಸ್‌ಗೆ ಕಡ್ಡಾಯವಾಗಿ ಸಲ್ಲಿಸಬೇಕು. ವ್ಯಕ್ತಿಗಳು, ಮನೆಗಳು ಅಥವಾ ವಾಣಿಜ್ಯ ಘಟಕಗಳು ಬಳಸುವ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಸಂಬಂಧಿಸಿದ ಡೇಟಾವನ್ನು ಈ ಡೇಟಾಬೇಸ್‌ನಲ್ಲಿ ಹಂಚಿಕೊಳ್ಳಲಾಗುವುದಿಲ್ಲ ಎಂದಿದೆ ಸಾರಿಗೆ ಇಲಾಖೆ.

ಇದಲ್ಲದೆ, ಸಾರ್ವಜನಿಕ ಚಾರ್ಜಿಂಗ್ ಆಪರೇಟರ್‌ಗಳು ಸಾರಿಗೆ ಇಲಾಖೆಯೊಂದಿಗೆ ಸಾರ್ವಜನಿಕರಿಗೆ ಮುಕ್ತವಾದ ಡೇಟಾಬೇಸ್‌ಗೆ ಚಾರ್ಜಿಂಗ್ ಪಾಯಿಂಟ್‌ಗಳಲ್ಲಿ ಬಳಸುವ ಸಂಪರ್ಕ ಸಂಖ್ಯೆಯನ್ನು ಒದಗಿಸುವಂತೆ ಸರ್ಕಾರವು ಸೂಚಿಸಿದೆ.

## ಏನಿದು ಡೇಟಾಬೇಸ್?

ಡೇಟಾಬೇಸ್ ಎನ್ನುವುದು ರಚನಾತ್ಮಕ ಮಾಹಿತಿಯ ಸಂಘಟಿತ ಸಂಗ್ರಹಗುಚ್ಛ. ಡೇಟಾವನ್ನು ಸಾಮಾನ್ಯವಾಗಿ ಕಂಪ್ಯೂಟರ್ ವ್ಯವಸ್ಥೆಯಲ್ಲಿ ವಿದ್ಯುನ್ಮಾನ ಮಾದರಿಯಲ್ಲಿ ಸಂಗ್ರಹಿಸಲಾಗುತ್ತದೆ. ಡೇಟಾಬೇಸ್ ಅನ್ನು ಡೇಟಾಬೇಸ್ ನಿರ್ವಹಣಾ ವ್ಯವಸ್ಥೆಯಿಂದ ನಿಯಂತ್ರಿಸಲಾಗುತ್ತದೆ. ಡೇಟಾ ಮತ್ತು ಡಿಬಿಎಂಎಸ್ ಜೊತೆಗೆ ಅವುಗಳಿಗೆ ಸಂಬಂಧಿಸಿದ ಅಪ್ಲಿಕೇಶನ್‌ಗಳನ್ನು ಒಟ್ಟಾರೆಯಾಗಿ ಡೇಟಾಬೇಸ್ ಸಿಸ್ಟಂ ಎನ್ನಲಾಗುತ್ತದೆ. ಇದೇ ತಂತ್ರಜ್ಞಾನವನ್ನು ಮೂಲವಾಗಿ ಇಟ್ಟುಕೊಂಡು ದೆಹಲಿ ಸರ್ಕಾರವು ಇವಿ ಚಾರ್ಜಿಂಗ್ ಸೌಲಭ್ಯದ ಮಾಹಿತಿಯನ್ನು ಡೇಟಾಬೇಸ್‌ನಲ್ಲಿ ಅಪ್‌ಡೇಟ್ ಮಾಡಿದೆ.

ಅಂದಹಾಗೆ, ಜಗತ್ತಿನೆಲ್ಲೆಡೆ ಟೆಕ್‌ಹಬ್ ಎಂದು ಗುರುತಿಸಿಕೊಂಡ ಬೆಂಗಳೂರಿನಲ್ಲಿ ಈ ಸೌಲಭ್ಯ ಅನುಷ್ಠಾನಕ್ಕೆ ಬರುವುದು ಯಾವಾಗ? ■


